# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು-560 002

**ಪತ್ರಿಕಾ ಪ್ರಕಟಣೆ** **ದಿನಾಂಕ: 04.01.2020**

## ಮಾನ್ಯ ಆಯುಕ್ತರು ರವರಿಂದ ಪ್ರಥಮ ರ್‍ಯಾಂಕ್ ಗಳಿಸಿದ ವಿಧ್ಯಾರ್ಥಿನಿ ರಹಮತುನ್ನೀಸಾಗೆ ಗೌರವ ಸನ್ಮಾನ:



ಬಿಬಿಎಂಪಿ ವತಿಯಿಂದ ನಡೆಸುತ್ತಿರುವ ಮಹಿಳಾ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿನಿ ರಹಮತುನ್ನೀಸಾ ಬಿಕಾಂ ಪದವಿಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯಕ್ಕೇ ಪ್ರಥಮ ರ್‍ಯಾಂಕ್ ಪಡೆದಿದ್ದಾರೆ. ಈ ಸಂಬಂಧ ಇಂದು ಮಾನ್ಯ ಆಯುಕ್ತರು ಶ್ರೀ ಬಿ.ಹೆಚ್.ಅನಿಲ್ ಕುಮಾರ್ ರವರು ಪಾಲಿಕೆ ಕೇಂದ್ರ ಕಛೇರಿಯಲ್ಲಿ ರಹಮತುನ್ನೀಸಾ ರವರನ್ನು ಸನ್ಮಾನಿಸಿ ಗೌರವಿಸಿದರು. ಈ ವೇಳೆ ವಿಶೇಷ ಆಯುಕ್ತರು(ಶಿಕ್ಷಣ) ಶ್ರೀ ವೃಷಬೇಂದ್ರ ಮೂರ್ತಿ, ವಿಶೇಷ ಆಯುಕ್ತರು(ಯೋಜನೆ) ಡಾ. ರವಿಕುಮಾರ್ ಸುರಪುರ, ಪೂರ್ವವಲಯ ಜಂಟಿ ಆಯುಕ್ತರು ಶ್ರೀಮತಿ ಪಲ್ಲವಿ, ಸಹಾಯ ಆಯುಕ್ತರು ಶ್ರೀ ನಾಗೇಂದ್ರ ನಾಯ್ಕ್, ವಿದ್ಯಾಧಿಕಾರಿ ಶ್ರೀ ಹರೀಶ್ ಕುಮಾರ್, ಬಿಬಿಎಂಪಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರು ಶ್ರೀ ಆನಂದ್ ಹಾಗೂ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಬಿಬಿಎಂಪಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿ ರಹಮತುನ್ನೀಸಾ, ಬಿಕಾಂ ಪದವಿಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಪ್ರಥಮ ರ್‍ಯಾಂಕ್ ಗಳಿಸಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದು ಪಾಲಿಕೆ ಆಯುಕ್ತರು ಆದ ಬಿ.ಹೆಚ್.ಅನಿಲ್ ಕುಮಾರ್ ರವರು ತಿಳಿಸಿದರು.

ರಹಮತುನ್ನೀಸಾ ರವರನ್ನು ಸನ್ಮಾನಿಸಿದ ಬಳಿಕ ಮಾತನಾಡಿದ ಆಯುಕ್ತರು, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ 475 ಪದವಿ ಕಾಲೇಜುಗಳಲ್ಲಿ 7 ಲಕ್ಷಕ್ಕೂ ಹೆಚ್ಚಿನ ವಿದ್ಯಾರ್ಥಿ/ವಿದ್ಯಾರ್ಥಿನಿಯರು 2016-19ನೇ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿದ್ದರು. ಈ ಪೈಕಿ ಬಿಬಿಎಂಪಿ ವ್ಯಾಪ್ತಿಗೊಳಪಡುವ 4 ಪದವಿ ಕಾಲೇಜುಗಳಲ್ಲಿ 2,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಬಿಎ, ಬಿ.ಕಾಂ ಪದವಿ ವ್ಯಾಸಂಗ ಮಾಡುತ್ತಿದ್ದು, ಅದರಲ್ಲಿ ರೆಹಮತುನ್ನೀಸಾ 4,600 ಅಂಕಗಳಿಗೆ 4,226(ಶೇ.91.87) ಅಂಕ ಪಡೆದು ಬೆಂಗಳೂರು ವಿಶ್ವವಿದ್ಯಾಲಯಕ್ಕೇ ಮೊದಲ ಸ್ಥಾನ ಪಡೆದಿದ್ದಾರೆ. **ರಹಮಾತುನ್ನೀಸಾ ಐ.ಎ.ಎಸ್(IAS)** ಆಗುವ ಗುರಿ ಹೊಂದಿದ್ದು, ಅವರ ಕನಸಿನ ಸಾಧನೆಗೆ ಪಾಲಿಕೆ ವತಿಯಿಂದ ಶುಭವನ್ನು ಕೋರುತ್ತಾ, ಅವಶ್ಯಕ ಸೌಲಭ್ಯಗಳನ್ನು ಪಾಲಿಕೆಯಿಂದ ಒದಗಿಸಲಾಗುವುದು ಎಂದು ಹೇಳಿದರು.

ರಹಮತುನ್ನೀಸಾ ರವರು ಕಾಲೇಜಿಗೆ ಉತ್ತಮ ರೀತಿಯ ಗ್ರಂಥಾಲಯ ಸೌಲಭ್ಯ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಾಗಲು ತರಬೇತಿ ನೀಡುವ ಸೌಲಭ್ಯ ಕಲ್ಪಿಸಲು ಮನವಿಮಾಡಿದ್ದಾರೆ. ಈ ಸಂಬಂಧ ಪಾಲಿಕೆ ವತಿಯಿಂದ ಕಾಲೇಜಿನ ಮೂಲಸೌಕರ್ಯ ಅಭಿವೃದ್ಧಿಪಡಿಸುವ ಜೊತೆಗೆ ಗ್ರಂಥಾಯಲ ಹಾಗೂ ತರಬೇತಿ ಸೌಲಭ್ಯ ಆರಂಭಿಸಲು ಕ್ರಮವಹಿಸಲಾಗವುದು ಎಂದರು.

**ಬಿಬಿಎಂಪಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರು ಆನಂದ್ ರವರು ಮಾತನಾಡಿ,** ಪುಲಕೇಶಿನಗರ ವಾರ್ಡ್ ವ್ಯಾಪ್ತಿಯ ಕ್ಲೀವ್ ಲ್ಯಾಂಡ್ ಟೌನ್(ಫ್ರೇಜರ್ ಟೌನ್)ನ ಬಿಬಿಎಂಪಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಬಿಕಾಂ ವಿದ್ಯಾರ್ಥಿನಿಯಾದ ರಹಮತುನ್ನೀಸಾ ಬೆಂಗಳೂರು ವಿಶ್ವವಿದ್ಯಾಲಕ್ಕೆ ಮೊದಲ ಸ್ಥಾನ ಪಡೆದಿರುವುದು ಹೆಮ್ಮೆಯವಿಚಾರವಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ರೆಹಮತುನ್ನೀಸಾ 4,600 ಅಂಕಗಳಿಗೆ 4,226(ಶೇ.91.87) ಅಂಕ ಪಡೆದು ಬೆಂಗಳೂರು ವಿಶ್ವವಿದ್ಯಾಲಯಕ್ಕೇ ಮೊದಲ ಸ್ಥಾನ ಪಡೆದಿದ್ದಾಳೆ. ಅದಲ್ಲದೆ ಹರಿಜ ಸುಲ್ತಾನ(ಶೇ.91.8), ಉಮ್ಮೆ ಹನಿ(ಶೇ.89.7), ಉಮ್ಮೆ ಕುಲ್ಸಮ್(ಶೇ.84.8), ಅರ್ಷಿಯಾ ತಾಜ್(ಶೇ.83.8), ಅನೀಸ(ಶೇ.83.4), ಪಾಥಿಮುನ್ನೀಸಾ(ಶೇ.82.5), ಸಮ್ರೀನ್ ಬಾನು(ಶೇ.82.1), ಉಮ್ಮೆ ಅಸ್ಮಾ(ಶೇ.80.4), ಅಲ್ಮಸ್ ತಾಜ್(ಶೇ.80.1) ಅಂಕ ಪಡೆದಿದ್ದಾರೆ ಎಂದು ತಿಳಿಸಿದರು.

ಬಿಬಿಎಂಪಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಶಿಕ್ಷಕರ ವೃಂದದ ಬೋಧನಾ ಗುಣಮಟ್ಟ ಚನ್ನಾಗಿದ್ದು, ನಿಗದಿತ ವೇಳಾಪಟ್ಟಿಯ ಪ್ರಕಾರ ಎಲ್ಲಾ ಪಠ್ಯಗಳನ್ನು ಮಾಡಿ ಮುಗಿಸಲಾಗುತ್ತದೆ. ಗುಣಮಟ್ಟದ ಶಿಕ್ಷಣ ನೀಡುತ್ತಿರುವ ಪರಿಣಾಮ ವಿದ್ಯಾರ್ಥಿಗಳು ಉತ್ತಮ ಅಂಕ ಗಳಿಸಲು ಸಾಧ್ಯವಾಗುತ್ತಿದೆ. ಇನ್ನೂ ಹೆಚ್ಚಿನ ವಿದ್ಯಾರ್ಥಿಗಳು ಉತ್ತಮ ರ್‍ಯಾಂಕ್ ಪಡೆಯುವಂತೆ ಮಾಡಲು ಕ್ರಮವಹಿಸಲಾಗುವುದು ಎಂದರು.

**ವಿದ್ಯಾರ್ಥಿನಿ ರಹಮತ್ತುನ್ನಿಸಾ ಮಾತನಾಡಿ,** ಕಾಲೇಜು ಪ್ರಾಂಶುಪಾಲರಾದ ಆನಂದ್ ಹಾಗೂ ಪ್ರಾಧ್ಯಾಪಕರು ಉತ್ತಮ ಬೋಧನೆ ಮಾಡಿರುವ ಪರಿಣಾಮ ಹೆಚ್ಚು ಅಂಕ ಗಳಿಸಲು ಸಾಧ್ಯವಾಯಿತು. ಮೊದಲ ರ್‍ಯಾಂಕ್ ಗಳಿಸಲು ಸಹಕರಿಸಿದ ನನ್ನ ತಾಯಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಾನು ಯಾವುದೇ ಟ್ಯೂಷನ್‌ಗೆ ಹೋಗುತ್ತಿರಲಿಲ್ಲ. ಕಾಲೇಜಿನಲ್ಲಿ ಮಾಡಿದ ಪಾಠದ ಜೊತಗೆ ಮನೆಯಲ್ಲಿ ನಿರತ ಅಭ್ಯಾಸ ಮಾಡುತ್ತಿದ್ದೆ. ಮೊದಲ ರ್‍ಯಾಂಕ್ ಪಡೆದಿರುವುದರಿಂದ ತುಂಬಾ ಖುಷಿಯಾಗುತ್ತಿದೆ. ಬೆಂಗಳೂರು ವಿವಿಯಲ್ಲಿ Mcom ವ್ಯಾಸಂಗ ಮಾಡುತ್ತಿದ್ದೇನೆ. **ಐ.ಎ.ಎಸ್** ಮಾಡುವುದು ನನ್ನ ಗುರಿಯಾಗಿದೆ ಎಂದರು.

ವಿಷಯವನ್ನು ತಮ್ಮ ಮಾಧ್ಯಮದಲ್ಲಿ ಪ್ರಕಟಿಸಲು ಕೋರಿದೆ.

ಸಾರ್ವಜನಿಕ ಸಂಪರ್ಕಾಧಿಕಾರಿ